ಹರಪನಹಳ್ಳಿ ಟೌನಿಗೆ ೫೦ ಹಾಸಿಗೆವುಳ್ಳ ಆಸ್ಪತ್ರೆಯ ಮಂಜೂರಾತಿ

೧೫೧ (೫೪೯) ಶ್ರೀ ಬಿ.ಹೆಚ್. ವೆಂಕನಾಯಕ (ಹರಪನಹಳ್ಳಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹರಪ್ಪನಹಳ್ಳಿ ನಗರಕ್ಕೆ ೫೦ ಹಾಸಿಗೆವುಳ್ಳ ಆಸ್ಪತ್ರೆಯನ್ನು ಮಂಜೂರು ಮಾಡುವುದಾಗಿ ಭರವಸೆ ಕೊಟ್ಟಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಸದರಿ ಭರವಸೆಯನ್ನು ತ್ವರಿತವಾಗಿ ಕಾರ್ಯಗತಗೊಳಿಸಲಾಗುವುದೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ.ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೇ ಹರಪನಹಳ್ಳಿ ನಗರಕ್ಕೆ ೫೦ ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಮಂಜೂರು ಮಾಡುವುದಾಗಿ ಭರವಸೆ ಕೊಟ್ಟಿರುವುದು ನಿಜವೆ ?

ಅಧ್ಯಕ್ಷರು.—ಆ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರವಲ್ಲಿ ಹೇಳಿದ ಮೇಲೆ ತಾವು ಪ್ರಶ್ನೆ ಏನು ಕೇಳುತ್ತೀರಿ (ಪ್ರಶ್ನೋತ್ತರ ವೇಳೆ ಮುಗಿಯಿತು)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಕೇಂದ್ರ ಸರ್ಕಾರ ರಾಜ್ಯಕ್ಕೆ ಸರಬರಾಜು ಮಾಡಿದ ಆಹಾರ ಪದಾರ್ಥಗಳ ಪ್ರಮಾಣ

೬೪ (೫೬) ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ಕಳೆದ ೧೦ ತಿಂಗಳಲ್ಲಿ ಯಾವ ಯಾವ ಆಹಾರ ಪದಾರ್ಥಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಿದೆ ?

ಆ) ಸರ್ಕಾರದವರ ಬೇಡಿಕೆ ಎಷ್ಟು ?

ಇ) ಕೇಂದ್ರ ಸರ್ಕಾರದವರು ಕೊಟ್ಟ ದಾಸ್ತಾನು ಪೂರ್ತಾ ಕರ್ನಾಟಕಕ್ಕೆ ತರಲಾಯಿತೆ ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಅಕ್ಕಿ ೧,೬೦,೦೦೦ ಟನ್. ಗೋಧಿ ೧,೨೦,೦೦೦ ಟನ್, ಸಕ್ಕರೆ ೧,೬೩,೪೫೨ ಟನ್

ಆ) ಅಕ್ಕಿ ೪೦,೦೦೦ ಟನ್ (ತಿಂಗಳಿಗೆ) ಗೋಧಿ ೧೫,೦೦೦ ಟನ್ (ತಿಂಗಳಿಗೆ)
(ಸಾರ್ವಜನಿಕರ ವಿತರಣೆ)

ಸಕ್ಕರೆ ೨೫,೦೦೦ ಟನ್ (ತಿಂಗಳಿಗೆ) ಗೋಧಿ ೪೦,೦೦೦ ಟನ್ (ತಿಂಗಳಿಗೆ)
(ಹಿಟ್ಟಿನ ಗಿರಣಿಗಳಿಗೆ)

ಇ) ಹೌದು (ಗೋಧಿಯನ್ನು ಬಿಟ್ಟು)

ಶಿವಮೊಗ್ಗದಲ್ಲಿ ಗ್ಲೂಕೋಸ್ ದ್ರಾವಣ ಘಟಕದ ಸ್ಥಾಪನೆ

೬೫ (೨೫೩) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಆಗತ್ಯ ಸರಬರಾಜು ಮಾಡುವ ಉದ್ದೇಶ್ಯ (ಐವಿಪ್ಲ್ಯುಯಿಡ್) ಇಂಜೆಕ್ಷನಿಗೆ ಉಪಯೋಗಿಸುವ ಗ್ಲೂಕೋಸ್ ದ್ರಾವಣ ತಯಾರಿಕೆ ಆಗತ್ಯ ಯಂತ್ರೋಪ್ಕರಣಗಳನ್ನು ಒದಗಿಸಲಾಗಿದೆಯೇ ?

ಅ) ಈಗಿನ ಅಗತ್ಯಗಳನ್ನು ಯಾವ ಆಸ್ಪತ್ರೆಗಳಿಂದ ಪೂರೈಸಲಾಗುತ್ತಿತ್ತು ?

ಇ) ಸದರಿ ಯಂತ್ರ ಸ್ಥಾಪನೆ ನಂತರವೂ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆ ಹೊರತು ಬೇರೆ ಆಸ್ಪತ್ರೆಗಳಿಗೆ ಗ್ಲೂಕೋಸ್ ದ್ರಾವಣ ಸರಬರಾಜು ಆಗಿಲ್ಲವೆಂಬುದು ಸರ್ಕಾರಕ್ಕೆ ವರದಿಯಾಗಿದೆಯೇ ಅಲ್ಲದೇ ಈ ಒಳಗೆ ಸರಬರಾಜು ಆಗುತ್ತಿದ್ದ ಕಡೆಗಳಿಂದಲೂ ಅಲ್ಪ ಉತ್ಪಾದನೆ ಕಡಿಮೆಯಾಗಿ ಸರಬರಾಜು ನಿಲ್ಲಿಸಿದ್ದಾರಲ್ಲವೆ ?

ಈ) ಈ ಅಗತ್ಯ ಪೂರೈಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಹೌದು

ಆ) ಈ ಕೆಳಗೆ ನಮೂದಿಸಿದ ಸ್ಥಳಗಳಿಂದ ತಾತ್ಕಾಲಿಕವಾಗಿ ಗ್ಲೂಕೋಸ್ ದ್ರಾವಣ ಸರಬರಾಜು ಆಗುತ್ತಿತ್ತು.

೧) ಮೆಗ್ಗಾನ್ ಆಸ್ಪತ್ರೆ, ಶಿವಮೊಗ್ಗ
೨) ಸರ್ಕಾರಿ ಔಷಧ ಉಗ್ರಾಣ, ಬೆಂಗಳೂರು
೩) ವೆನ್‌ಲಾಕ್ ಆಸ್ಪತ್ರೆ, ಮಂಗಳೂರು
೪) ಸಿ.ಜಿ. ಆಸ್ಪತ್ರೆ, ದಾವಣಗೆರೆ
೫) ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ
೬) ತುರ್ತು ಪರಿಸ್ಥಿತಿಯಲ್ಲಿ ಸ್ಥಳೀಯ ಖರೀದಿ

ಇ) ಮೆಗ್ಗಾನ್ ಆಸ್ಪತ್ರೆಯಲ್ಲಿ ದಿನಂಪ್ರತಿ ೪೫೦ ಬಾಟಲಿ ಗ್ಲೂಕೋಸ್ ದ್ರಾವಣ ತಯಾರು ಮಾಡಲು ಶಕ್ಯವಾಗಿದೆ. ಆದರೆ ಇದಕ್ಕೆ ಬೇಕಾದ ಕಟ್ಟಡ ಇಲ್ಲದಿರುವುದರಿಂದ ಅಷ್ಟು ತಯಾರು ಮಾಡಲು ಆಗುತ್ತಿಲ್ಲ ಹೊಸ ಕಟ್ಟಡ ಕಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ. 'ಆ' ಪ್ರಶ್ನೆಯ ಉತ್ತರದಲ್ಲಿ ತಿಳಿಸಿದ ಆಸ್ಪತ್ರೆಗಳಿಂದ ಕೆಲವು ವೇಳೆ ಸರಿಯಾದ ಪ್ರಮಾಣದಲ್ಲಿ ಗ್ಲೂಕೋಸ್ ದ್ರಾವಣ ಸರಬರಾಜು ಆಗುವುದಿಲ್ಲ ಕಾರಣ ಕೆಲವು ಸಲ ವಿದ್ಯುಚ್ಛಕ್ತಿಯಲ್ಲಿ ಕಡಿತ ಅಗತ್ಯವಾದ ನೀರು ಪೂರೈಕೆ ಇಲ್ಲದಿರುವುದು ಯಂತ್ರೋಪಕರಣಗಳು ಕೆಡುವುದು ಆವ ಕಾರಣ 'ಆ' ಘಟಕಗಳಿಂದಲೂ ಬೇಕಾದಷ್ಟು ಗ್ಲೂಕೋಸ್ ದ್ರಾವಣ ಸರಬರಾಜು ಆಗುವುದಿಲ್ಲ. ಸರ್ಕಾರ ಔಷಧ ಮಳಿಗೆ ಮತ್ತು ಸ್ಥಳೀಯ ಖರೀದಿಯಿಂದ ಹೆಚ್ಚುವರಿ ಅಗತ್ಯ ಗ್ಲೂಕೋಸ್ ದ್ರಾವಣ ಪೂರೈಸುತ್ತಿದೆ,

ಈ) ಮೆಗ್ಗಾನ್ ಆಸ್ಪತ್ರೆಯಲ್ಲಿ ಗ್ಲೂಕೋಸ್ ತಯಾರಿಕಾ ಘಟಕವನ್ನು ಬೇಕಾದ ಹೊಸ ಕಟ್ಟಡ ಕಟ್ಟುವವರೆಗೂ ಇರುವ ಪರಿಸ್ಥಿತಿ ಹೆಚ್ಚು ಗ್ಲೂಕೋಸ್ ದ್ರಾವಣ ತಯಾರು ಮಾಡುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ರೂ. ೫,೧೦,೦೦೦ ಮೌಲ್ಯದ ನಕಾಕ್ಷಿ ಮತ್ತು ಅಂದಾಜು ಪಟ್ಟಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಕುಂದಾಪುರದಲ್ಲಿ ಆರಕ್ಷಕ ಸಿಬ್ಬಂದಿಗಳ ಕೊರತೆ

೬೬ (೨೮೭) ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಸಿಬ್ಬಂದಿಯನ್ನು ನೇಮಿಸಿಕೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಕಂದಾಪುರ ಆರಕ್ಷಕ ಠಾಣೆಯಲ್ಲಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಇ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿಯ ಆರಕ್ಷಕ ಠಾಣೆಯಲ್ಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ?